# ಮಳೆ, ಮಂಜಿನ
# ಆಗುಂಬೆಯಲ್ಲಿ..!







**ಆಗುಂಬೆಯೆಂದರೆ ಕೇವಲ ಸೂರ್ಯಾಸ್ತವಲ್ಲ. ಅದನ್ನೂ ದಾಟಿ ಒಳಹೊಕ್ಕರೆ ಕಾಡು, ಮಳೆಯ ನಡುವೆ ಇನ್ನೊಂದು ಲೋಕವಿದೆ..**

ಚಿತ್ರ– ಲೇಖನ: **ಭಾನು ಪ್ರಕಾಶ್ ಕೆ.ಎನ್.**

ಲಗೇಜ್ ಪ್ಯಾಕ್ ಮಾಡುವ ಅವಸರ, ನಿಮಿಷಕ್ಕೊಂದರಂತೆ ವ್ಯಾಟ್ಸ್ ಆ್ಯಪ್‌ನಲ್ಲಿ ಪ್ರವಾಸದ ಗ್ರೂಪಿಂದ ಬರುತ್ತಿದ್ದ ಮೆಸೇಜ್‌ಗಳು ತಂದ ಚಡಪಡಿಕೆ, ಎಲ್ಲಾ ತರಾತುರಿಯ ನಡುವೆ ಮುಂಚೆಯೇ ಮಾಡಿಟ್ಟಿದ್ದ ಪಟ್ಟಿಯನುಸಾರ ಬಟ್ಟೆ, ಕ್ಯಾಮೆರಾ, ಬೈನಾಕುಲರ್ಸ್ ಮತ್ತು ಹಲವು ವಸ್ತುಗಳನ್ನು ದೊಡ್ಡ ಬ್ಯಾಗ್ ಒಂದರಲ್ಲಿ ತುಂಬಿ ಸುಸ್ತಾಗುವ ನಡುವೆಯೂ ಮೂಡುವ ಉತ್ಸಾಹ ಆಹಾ! ಅದು ಆಹ್ಲಾದರಕರ ಹೊಸ ಉಲ್ಲಾಸದೆಡೆಗಿನ ಪಯಣದ ಖುಷಿ. ಮೂರು ದಿನದ ಮಟ್ಟಿಗೆ ಮಳೆಕಾಡಿಗೆ ಹೊರಟು ನಿಂತ ಸಂಭ್ರಮ...

**Mysticwild.in** ಉತ್ಸಾಹಿ ಕಾರ್ಪೋರೇಟ್ ಉದ್ಯೋಗಿಗಳನ್ನು ಪರಿಸರದ ವಿವಿಧ ಮಜಲುಗಳಿಗೆ ಪರಿಚಯಿಸುತ್ತಿರುವ ಬೆಂಗಳೂರು ಮೂಲದ ಇಕೋ ಟೂರಿಸಂ ಕಂಪೆನಿ; ಒಂದು ವರ್ಷದ ಹಿಂದೆ ಸ್ಥಾಪಿತವಾಗಿ ಕರ್ನಾಟಕದ ಉದ್ದಗಲಕ್ಕೂ ಸಾಕಷ್ಟು ಪ್ರವಾಸಗಳನ್ನು ಏರ್ಪಡಿಸಿ, ದೊಡ್ಡ ತಂಡವಾಗಿ ಬೆಳೆಯುತ್ತಿದೆ. ಇವರೊಟ್ಟಿಗೆ ನಾನು **Naturalist** ಆಗಿ ಸಹಿ ಹಾಕಿ ಹೊಸ ಅಧ್ಯಾಯ ಒಂದನ್ನು ಪ್ರಾರಂಭಿಸಿದೆ. ಅದರಲ್ಲಿ ನನ್ನ ಜವಾಬ್ದಾರಿ ಹೆಚ್ಚಿತ್ತು. ನಾವು ತೆರಳುವ ಜಾಗದಲ್ಲಿನ ಜೀವ ವೈವಿಧ್ಯ ಮತ್ತು ಆ ಜಾಗದ ಗುಣ